# ಅಲಯನ್ಸ್ ವಿಶ್ವವಿದ್ಯಾಲಯ ಪದವಿ ಪ್ರದಾನ ಸಮಾರಂಭ



**ಆನೇಕಲ್:** ವಿದ್ಯಾರ್ಥಿಗಳು ಕಲಿಕೆಯ ಜೊತೆಗೆ ಸಮಾಜ ಎದುರಿಸುತ್ತಿರುವ ಸವಾಲುಗಳನ್ನು ಅರ್ಥ ಮಾಡಿಕೊಳ್ಳುವ ಮನೋ ಧೋರಣೆಯನ್ನು ಬೆಳೆಸಿಕೊಳ್ಳಬೇಕು ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು. ಅಲಯನ್ಸ್ ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಮಾತನಾಡಿದ ಅವರು, ''140 ಕೋಟಿ ಜನಸಂಖ್ಯೆಯ ಭಾರತದಲ್ಲಿ ಶಿಕ್ಷಣ ಸಂಸ್ಥೆಗಳ ಮೇಲೆ ಹೆಚ್ಚಿನ ನಿರೀಕ್ಷೆ ಇದೆ. ಶಿಕ್ಷಣ ಸಂಸ್ಥೆಗಳ ಮೂಲಕವೇ ನಾವು ಸದೃಢ ರಾಷ್ಟ್ರವನ್ನು ಕಟ್ಟಬೇಕಾಗಿದೆ. ಇದು ಕೇವಲ ಶಿಕ್ಷಣ ಸಂಸ್ಥೆಗಳು ಹಾಗೂ ವಿದ್ಯಾರ್ಥಿ ವೃಂದದಿಂದ ಸಾಧ್ಯವಿಲ್ಲ, ಉದ್ಯಮ ವಲಯ, ಸ್ವಯಂ ಸೇವಾ ಸಂಸ್ಥೆಗಳು ಸೇರಿದಂತೆ ಸಮಾಜದ ಎಲ್ಲಾ ರಂಗಗಳು ಇದರಲ್ಲಿ ಭಾಗಿಯಾಗಬೇಕು,'' ಎಂದರು. ''ಉದ್ದಿಮೆಗಳು ಕೇವಲ ನೇಮಕಾತಿ ಸಮಯದಲ್ಲಿ ಮಾತ್ರ ಶಿಕ್ಷಣ ಸಂಸ್ಥೆಗಳತ್ತ ಮುಖ ಮಾಡಬಾರದು. ನಿರಂತರ ಸಂಪರ್ಕ ಹೊಂದಬೇಕು. ವಿದ್ಯಾರ್ಥಿಗಳ ಇಂಟರ್ನ್‌ಶಿಪ್‌ಗೆ ಯೋಜಿತ ವ್ಯವಸ್ಥೆ ರೂಪಿಸಬೇಕು. ವಿದ್ಯಾರ್ಥಿ ಹಂತ ಮುಗಿದ ಮೇಲೆ ಅಪಾರ ಅವಕಾಶಗಳಿವೆ. ಆದರೆ, ಇವನ್ನು ಕಂಡುಕೊಳ್ಳಲು ನಾಲ್ಕು ಗೋಡೆಗಳಿಂದಾಚೆಗೆ ನೋಡುವ ದೃಷ್ಟಿಕೋನದ ಅಗತ್ಯ ಇದೆ,'' ಎಂದು ಅವರು ನುಡಿದರು. ನ್ಯಾಯಮೂರ್ತಿ ಎಸ್.ಆರ್.ಬನ್ನೂರು ಮಠ, ತಾಂತ್ರಿಕ ಉದ್ಯಮಿ ಹರ್ಷಿತ್ ಸಿಂಘಾಲ್, ಪ್ರೇಮಾನಂದ ಶೆಟ್ಟಿ, ಸಮಕುಲಾಧಿಪತಿ ಅಭಯ್ ಛಬ್ಬಿ, ಕುಲಪತಿ ಡಾ.ಅನುಭಾ ಇದ್ದರು.